# ಜಪತಪ

ನಮ್ಮ ಧಾರ್ಮಿಕ ಬದುಕಿನಲ್ಲಿ ಜಪತಪಗಳಿಗೆ ಮಾನ್ಯತೆ ಉಂಟು. ಇದು ಸಗುಣ ಆರಾಧನೆಗೆ ಬಹುಮುಖ್ಯವಾದ ಪ್ರವೇಶ ದ್ವಾರ. ಜಪತಪ ಎಂಬುದು ಬಹುತೇಕವಾಗಿ ಜೋಡುಪದವಾಗಿಯೇ ಈಗ ಬಳಕೆಯಾಗುತ್ತಿದೆ. ಇದು ಜೋಡು ಹೆಣಿಗೆಯಾಗಿದ್ದು ಮಧ್ಯಕಾಲದಲ್ಲೆಂದು ತೋರುತ್ತದೆ. 'ಜಪತಪಂಗಳಿಗೆ ಕಾಯವಿಲ್ಲ' ಎಂಬಂಥ ಮಾತುಗಳಿವೆ. ಇದಕ್ಕೂ ಹಿಂದೆ ಹೋದರೆ ಜೋಡುಪದವಾಗಿ ಇದು ಬಳಕೆಯಲ್ಲಿ ಇಲ್ಲ. ಇದೊಂದು ಸ್ವಾರಸ್ಯದ ಸಂಗತಿ. ಜಪ ಎಂಬ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಆದರೆ, ಅದರ ನಿಶ್ಚಿತವಾದ ಅರ್ಥದ ಪದರಿನ ಕಡೆ ನಮ್ಮ ಗಮನ ಹೋಗಿಲ್ಲ. ಸಾಮಾನ್ಯವಾಗಿ 'ಭಗವಂತನ ಆರಾಧನೆ' ಎಂಬ ಅರ್ಥದಲ್ಲಿಯೇ ನಾವು ಇದನ್ನು ಬಳಸುವುದುಂಟು. ಆದರೆ, 'ಜಪ' ಶಬ್ದದ ಪರಿಕಲ್ಪನೆ ಪತಂಜಲಿಗಳಿಗಿಂತ ಪ್ರಾಚೀನ. ಪತಂಜಲಿ ಮಹರ್ಷಿಗಳು 'ತಜ್ಜಪಃ ತದರ್ಥಭಾವನಂ' ಎಂದು ಬಳಸಿದ್ದಾರೆ. ಗೀತೆಯಲ್ಲಿ 'ಜಪಯಜ್ಞ' ಎಂಬ ಮಾತು ಬಂದಿದೆ. ಇನ್ನು 'ತಪ' ಎಂಬುದು 'ತಪಸ್' ಎಂಬುದರ ಹ್ರಸ್ವೀಕರಣ ರೂಪವಾಗಿ ಕನ್ನಡದಲ್ಲಿ ಬಳಕೆಗೊಂಡಿದೆ. ಆದರೆ, ಸಂಸ್ಕೃತದಲ್ಲಿ ಬಳಕೆಯಲ್ಲಿರುವ 'ತಪ'ಕ್ಕೆ ಬೇರೆ ಅರ್ಥವೇ ಉಂಟು.

ಜಪ ಎಂಬುದಕ್ಕೆ ಕೋಶಕಾರರು 'ಮಾನಸೇ ವ್ಯಕ್ತಾಯಾಂ ವಾಚಿ' ಎಂದು ಹೇಳಿದ್ದಾರೆ. ಇದಕ್ಕೆ ಜಪಿಸುವ ಕ್ರಿಯೆ ಎಂದು ಅರ್ಥ. ಮಂತ್ರವನ್ನು ಮನಸ್ಸಿನಲ್ಲಿ ಪುನಃ ಪುನಃ ಆಲೋಚನೆ ಮಾಡುವ ಕ್ರಿಯೆ ಎಂಬ ಅರ್ಥದ ನೆಲೆಸು ಇಲ್ಲುಂಟು. ಇನ್ನು 'ತಪ' ಎಂಬುದಕ್ಕೆ ಸಂತಾಪೇ ಎಂದೂ ಐಶ್ವರ್ಯೇ ಎಂದೂ ದಾಹೇ ಎಂದೂ ವ್ಯುತ್ಪತ್ತಿ ಉಂಟು. ನಿಯಮದಿಂದ ದೇಹದಂಡನೆ, ಸಾಮರ್ಥ್ಯ, ಸುಡುವ ಕ್ರಿಯೆ ಎಂಬ ಅರ್ಥಗಳಿವೆ. ತಪತಪನ ಎಂಬ ಶಾಬ್ದಿಕರೂಪದ ಜಾಡನ್ನು ಹಿಡಿದರೆ 'ಸೂರ್ಯ' ಎಂಬ ಅರ್ಥದ ಪದರು ನಮಗೆ ಕಾಣಿಸುತ್ತದೆ. ತಪ ಎಂದರೂ ಸೂರ್ಯ; ತಪನ ಎಂದರೂ ಸೂರ್ಯ! ಹೀಗೆ ಶಾಬ್ದಿಕ ವಿನ್ಯಾಸದ ವಿವಿಧ ಬಗೆಯ ಗೈರತ್ತುಗಳನ್ನು ನಾವು ಅನ್ವೇಷಿಸುತ್ತ ಹೋಗಬಹುದು.

ಜಪತಪ ಎಂಬ ಮಾತಿನಲ್ಲಿ ಮೊದಲು ಜಪದ ವಿವಿಧ ಬಗೆಯ ಸಾಂಸ್ಕೃತಿಕ ಎಳೆಗಳನ್ನು ನಾವೀಗ ಗಮನಿಸೋಣ. ಪತಂಜಲಿ ಋಷಿಗಳು 'ತಜ್ಜಪಃ ತದರ್ಥ ಭಾವನಂ' ಎಂದು ಹೇಳಿದ್ದು ಸರಿಯಷ್ಟೆ. ಇದು ಋಷಿಪ್ರೋಕ್ತವಾದುದು. ಆ ಜಪ ಇದೆಯಲ್ಲಾ ಅದು ಭಾವನೆಗಳನ್ನು ಹೇಳುತ್ತದೆಂಬುದು ಪತಂಜಲಿ ಋಷಿಗಳ ಮನೀಷೆ. 'ಶ್ರೀಕೃಷ್ಣಾಯ ನಮಃ' ಎಂಬ ಮಂತ್ರವೊಂದನ್ನು ನೀವು ಜ್ಞಾಪಿಸಿಕೊಳ್ಳಿ. ಇದು ಶಾಬ್ದಿಕವಾಗಿ ಜಪಿಸುವ ಕ್ರಿಯೆಯಾದರೆ ಅದಕ್ಕೆ ಅರ್ಥ ಇಲ್ಲ. ಈ ಮಂತ್ರದ ಅರ್ಥದ ಪರಿಧಿಯನ್ನು ಹಿಡಿದು ಜಪಿಸಿದಾಗ ಅದು ಕೇವಲ ಶಾಬ್ದಿಕ ಆರೋಹಣ ಅವರೋಹಣ ಮಾತ್ರ ಆಗುತ್ತದೆ. ಯಾರು ಅದನ್ನು ಸ್ವೀಕರಿಸಿ ನುಡಿಯುತ್ತಾರೋ ಅಲ್ಲಿ ಅದು ಸಾಕ್ಷಾತ್ಕಾರಗೊಳ್ಳುತ್ತದೆ. ಅರ್ಥದ ಒಗಟು ಹಿಡಿದರೆ ಸುಖವಿಲ್ಲ. ಜಪ ಕೇವಲ ಆರಾಧನೆಯಲ್ಲ. ಅದು ಪೂಜೆಯಿಂದ ಮಾತ್ರವೇ ಕೊನೆಗೊಳ್ಳುವುದಿಲ್ಲ. 'ಜಪ' ಎಂಬುದು ಬಾಹ್ಯಕ್ರಿಯೆಯಲ್ಲ. ಅದೊಂದು ಮಾನಸಿಕ ಕ್ರಿಯೆ. ವೈಯಾಕರಣರು ಶಾಬ್ದಿಕ ರೂಪಾರ್ಥವನ್ನು ಹೇಳಲು ಹೆಣಗಿದರು. ಅವರಿಗೆ ಅದೊಂದು ಅಂತರಂಗದ ಕ್ರಿಯೆಯೆಂದು ತಿಳಿಯಲಾಗಲಿಲ್ಲ. ಪತಂಜಲಿ ಮಹರ್ಷಿಗಳು ಇದೇ ಕಾರಣಕ್ಕೆ 'ಮಾನಸೇ ವ್ಯಕ್ತಾಯಾಂ ವಾಚಿ' ಎಂದು ಮುಂದಿನವರು ತಿಳಿಯಲು ಅನುಕೂಲವಾಗುವಂತೆ 'ತಜ್ಜಪಃ ತದರ್ಥ ಸಾಧನಮ್' ಎಂದು ಕೈವಾರಿಸಿಬಿಟ್ಟರು. ಇದು ಮನಸ್ಸಿನಲ್ಲಿ ವ್ಯಕ್ತವಾಗುವ ಮಾತು! ಮೌನದ ಹಿಂದಿರುವ ಮಾತ್ರಕಲ್ಪ. ಈ ಕಲ್ಪವನ್ನು ಹಿಡಿದರೆ 'ಜಪ'ದ ಬೇರುಗಳು ನಮ್ಮವರೆಗೆ ಬರಲು ಸಾಧ್ಯ.

ಜಪಕ್ಕೆ ಗುರುಶಿಷ್ಯರು ಬೇಕು. ಗುರುವು ಯಾವುದಾದರೂ ಮಂತ್ರವೊಂದನ್ನು 'ಹೇಳುತ್ತಾನೆ' ಎಂಬ ಸಂಗತಿ ಸರಿಯಲ್ಲ. ಅವನು 'ಉಪದೇಶಿಸುತ್ತಾನೆ' ಎಂಬುದು ಸತ್ಯ. ಈ ಮಂತ್ರಜಪ ಶಿಷ್ಯನಲ್ಲಿ ಅಂಕುರಿಸುತ್ತದೆ. ಗುರು ಕಂಡದ್ದನ್ನು ಶಿಷ್ಯ ಕಾಣಲು ಯತ್ನಿಸುತ್ತಾನೆ. ಇದು ಮಾನಸಲೋಕದಲ್ಲಿ ಬಲಗೊಳ್ಳುವ ಹಾಗೂ ಒಳಗೊಳ್ಳುವ ಕ್ರಿಯೆ. ಬುದ್ಧ ಭಗವಂತನು 'ಧ್ಯಾನಕ್ಕೆ' ಪ್ರಾಧಾನ್ಯ ನೀಡಿದ್ದನು. 'ಜಪ'ವೂ ಧ್ಯಾನಕ್ರಿಯೆಯ ಸತ್ಫಲ ತಾನೆ? ವಿಶ್ವಾಮಿತ್ರ ಮಂತ್ರೀಕರಿಸಿದ ಗಾಯತ್ರಿ ಯಾವ ದೌರ್ಬಲ್ಯದಿಂದಾಗಿಯೊ ವಿಕಲವಾಗಿ ಮಂತ್ರವೂ ಆಗದೆ; ಜಪವೂ ಆಗದೆ ಜಡವಾದ ಒಂದು ಕರ್ಮವೆನಿಸಿದೆ. ಇದು ಸಾಧಕನ ವೈಗುಣ್ಯದಿಂದಾಗಿ ಹೀನವಾಗಿದೆ. ಜಪದಲ್ಲಿ ಎರಡು ಬೇರುಗಳುಂಟು. ಮೊದಲನೆಯದು ನಾಮಜಪ; ಎರಡನೆಯದು ಮಂತ್ರಜಪ. ಪರಂಪರೆಯಲ್ಲಿ ನಾಮಜಪವನ್ನು 'ನಾಮಸ್ಮರಣೆ' ಎನ್ನುತ್ತಾರೆ. ಮಂತ್ರಜಪವನ್ನು 'ಮಂತ್ರಾನುಷ್ಠಾನ' ಎಂದು ಕರೆಯುತ್ತಾರೆ. ಈ ಸೂಕ್ಷ್ಮಭೇದವನ್ನು ಸಾಧಕರು ತಿಳಿಯಬೇಕು. ನಾಮ ಎಲ್ಲಿ ಮಂತ್ರವಾಗುತ್ತದೆ? ಎಲ್ಲಿ ಪ್ರಾರ್ಥನೆಯ ಮೂಲಕ ಬರಿ ಸ್ಮರಣೆಯಾಗಿ ಮಾತ್ರ ನೆಲೆ ನಿಲ್ಲುತ್ತದೆಯೊ ಅದನ್ನೂ ಅರಿಯಬೇಕು. ಇದರ ರಹಸ್ಯವನ್ನು ಬಲ್ಲವರೇ ಬಲ್ಲರೆಂದರೆ ಹೆಚ್ಚು ಸೂಕ್ತ. ಮನಸ್ಸು ಚಂಚಲವಾದಾಗ 'ನಾಮಜಪ'ಕ್ಕೆ ಅವಕಾಶ ಉಂಟು. ದಾಸರು 'ರಾಮಮಂತ್ರವ ಜಪಿಸೋ' ಎಂದೂ 'ಒಂದು ಬಾರಿ ಸ್ಮರಣೆ ಸಾಲದೆ?' ಎಂದೂ ಹೇಳಿದ್ದಾರಷ್ಟೆ. ನಾಮಜಪವು ಸಮರ್ಪಣೆಯ ಅಭೀಪ್ಸದ ಮೇಲೆ ನಿಂತಿದೆ. ಆದರೆ, ಮಂತ್ರಜಪವು ತನ್ನ ದಾರ್ಶನಿಕ ಅರ್ಹತೆಯಿಂದ ನಾಮಪ್ರಾಂತ್ಯವನ್ನು ಅತಿಕ್ರಮಿಸಿ ಮುನ್ನಡೆದಿದೆ. ನಾಮಜಪ ರಸರೂಪವಾದುದು. ಮಂತ್ರಜಪ ಪ್ರಕಾಶರೂಪವಾದುದು. ಗೀತೆಯಲ್ಲಿ 'ಯಜ್ಞಾನಾಂ ಜಪಯಜ್ಞೋಸ್ಮಿ' ಎಂದು ಹೇಳಿದೆ. ಜಪವು ಒಂದು ಯಜ್ಞಸದೃಶವಾದ ಕ್ರಿಯೆ. ತನ್ನನ್ನು ತಾನೇ ಸಮಗ್ರವಾಗಿ ಅರ್ಪಿಸಿಕೊಳ್ಳುವ ಅವ್ಯಾಹತ ಪ್ರಯತ್ನ. ಇದರ ರಹಸ್ಯ ಬಲ್ಲವರಿಗೆ 'ಜಪ' ಎಂಬುದು ಬಾಹ್ಯಾಚಾರದ ಕ್ರಿಯೆಯಲ್ಲ ಎಂಬುದು ಅರಿವಾಗುತ್ತದೆ. ನಾಮಜಪವುಮಂತ್ರಜಪದಲ್ಲಿ ಕ್ರಿಯೈಕ್ಯಗೊಳ್ಳಬೇಕು. ನಾಮಜಪವು ಬಾಹ್ಯ, ಮಂತ್ರಜಪವು ಆಂತರಂಗಿಕ ಎಂಬುದು ಪ್ರಥಮ ಸೋಪಾನದಲ್ಲಿ ಸರಿ. ಅದು ಮುಂದುವರೆದಂತೆಲ್ಲಾ 'ತಪ'ವಾಗಿ ಪರಿಣಮಿಸುತ್ತದೆ. ಇಲ್ಲಿ ಕತ್ತಲೆ ಕರಗಿ ಹೋಗಿ ಬೆಳ್ಳಂಬೆಳಕೇ ವಿರಾಜಮಾನವಾಗುತ್ತದೆ! ನಾವು ಜಪವನ್ನು ಬಾಹ್ಯಾಚಾರದ ಅಂಗವಾಗಿ ಇರಿಸಿಕೊಂಡಿದ್ದೇವೆ. ಅದು ಅಂತರಂಗದಲ್ಲಿ 'ತಪನ'ಗೊಳ್ಳಬೇಕು. ಇಲ್ಲದೆ ಹೋದರೆ ಅಲ್ಲಮಪ್ರಭು 'ಆಡಂಬರವಿದೇನೊ?' ಎಂಬ ಉದ್ಗಾರಕ್ಕೆ ಲೋಕಸಾಕ್ಷಿಯಾಗಿಬಿಡುತ್ತದೆ. ಕೊನೆಗೂ ಬೇಕುಬೇಡಗಳ ಆಯ್ಕೆ ನಮ್ಮದು ತಾನೆ?

■ **ಪುರಂಜೀವಿ**

## ಮಾತೇ ಮುತ್ತು

◆ ನಮಗೆ ನಮ್ಮಲ್ಲಿ ನಂಬಿಕೆ ಇದ್ದರೆ ಮಾತ್ರ ಭವಿಷ್ಯದಲ್ಲಿ ನಮಗೆ ನಂಬಿಕೆ ಇರುತ್ತದೆ.
—ಜಾನ್ ಎಫ್. ಕೆನಡಿ

◆ ಸಾವಿರ ಕಲ್ಲು ದೇವರಿಗೆ ನೈವೇದ್ಯ ಮಾಡುವುದು ವ್ಯರ್ಥ, ಹಸಿದವನಿಗೆ ಅನ್ನ ನೀಡುವುದು ಅರ್ಥ.
—ಸಾ.ಶಿ. ಮರುಳಯ್ಯ

◆ ನಿರಾಶೆ ಹೃದಯ ಹಿಂಡುವ ಬಿರುಗಾಳಿ.
—ಷಿಲ್ಲರ್

◆ ಮಾತ್ಸರ್ಯ ಅನ್ನುವುದು ಜನರನ್ನೇ ಏನು ಇಡೀ ಊರನ್ನೇ ನುಂಗಿ ನೊಣೆದು ಬಿಡುವ ನರಕದ ಬೆಂಕಿ.
— ಶ್ರೀಕೃಷ್ಣ ಆಲನಹಳ್ಳಿ

◆ ಒಳ್ಳೆಯ ಗ್ರಂಥಗಳನ್ನು ಓದದ ಸುಶಿಕ್ಷಿತನಿಗೂ ಅವುಗಳನ್ನು ಓದಲರಿಯದ ನಿರಕ್ಷಿತನಿಗೂ ವಿಶೇಷ ವ್ಯತ್ಯಾಸವಿಲ್ಲ.
—ಮೆಂಕೇನ್

◆ ಸೋಮಾರಿತನ ದೇಹದ ದಡ್ಡತನ, ದಡ್ಡತನ ಮನಸ್ಸಿನ ಸೋಮಾರಿತನ.
—ಸ್ಯೂವರ್

◆ ನಿಸರ್ಗದಿಂದ ಅನಂತದತ್ತ ನಡೆದಿರುವ ಹಜ್ಜೆಯೇ ಕಲೆ.
—ಖಲೀಲ್ ಗಿಬ್ರಾನ್

◆ ಒಬ್ಬನ ಗುರಿಯನ್ನು ಅರಿತೇ ಅವನು ಎಂಥವನೆಂಬುದನ್ನು ಕಂಡುಕೊಳ್ಳಬಹುದು.
—ಹೋಮರ್